



ನಂದಾ ಕೇಶವ ಜಹಗೀರದಾರ್

ನಮಿತಾ ಭಾರತದವಳು ಎಂಬ ಕಾರಣಕ್ಕಾಗಿಯೇ ಅವಳ ಸ್ನೇಹಶೀಲತೆಯಿಂದಲೋ, ಗಂಭೀರವಾಗಿ ಮಾತಾಡುತ್ತಿದ್ದರೂ ಇದ್ದಕ್ಕಿದ್ದಂತೆ ಹಾಸ್ಯ ಸನ್ನಿವೇಶ ಸೃಷ್ಟಿಸಿ ನಗಿಸುತ್ತಿದ್ದ ಪರಿಗೋ, ಅದ್ಯಾವ ಕಾರಣಕ್ಕೋ ನನಗೆ ತೀರಾ ಆತ್ಮೀಯಳಾಗಿದ್ದಳು. ಅವಳದು ಪ್ರೀತಿಯ ಸೆಲೆ, ಅವಳ ಗಂಡ ಅಹಂ ಬಿಟ್ಟು ಕೊಡದ ಸರ್ವಾಧಿಕಾರಿ. ಮಕ್ಕಳೋ ಅಪ್ಪನ ಪ್ರೀತಿಯನ್ನು ಬಿಡಲೊಪ್ಪದ, ಅಮ್ಮನ ಅಂತಃಕರಣದ ನೆರಳಿನಲ್ಲಿ ಸುಖ ಬಯಸುವ ಶಾಂತ ಚಿಲುಮೆಗಳು.

ತಾಳ್ಮೆ ಮೀರಿ ಸ್ಫೋಟಗೊಂಡಾಗ ಅವಳು ಮಾಡುತ್ತಿದ್ದ ಹರತಾಳ ವೆಂದರೆ ಮೌನ. ಒಂದೆರಡು ದಿನ ಕಳೆಯುವಷ್ಟರಲ್ಲಿ ಮನೆ ರವ ರವ ನರಕದಂತೆ ಭಾಸವಾಗುತ್ತಿತ್ತು. ಮಕ್ಕಳು ಮಧ್ಯವರ್ತಿಗಳಾಗುತ್ತಿದ್ದರು. ಏನೇ ಆದರೂ ಅಮ್ಮನ ಬೇಡಿಕೆಗಳು ಮಾತ್ರ ಈಡೇರುವ ಹಾಗೆ ಕಾಣುತ್ತಿರಲಿಲ್ಲ. ಮಕ್ಕಳ ಮೃದು ಮನಸ್ಸಿನ ಮೆಲೆ, ವಿದ್ಯಾಭ್ಯಾಸದ ಮೇಲೆ ವ್ಯತಿರಿಕ್ತ ಪರಿಣಾಮವಾದೀತೆಂದು ಪ್ರತಿ ಬಾರಿಯೂ ಸೋಲುತ್ತಿದ್ದುದು ಅವಳೆ. ನಮ್ರತೆಯ ಸಾಕಾರ ಮೂರ್ತಿ ನಮಿತಾ.

ಅವಳು ಒಂದು ದಿನ ನನಗೆ ಸಿಗದೆ ಹೋದರೆ ಏನೋ ಕಳೆದುಕೊಂಡಂತಾಗುತ್ತಿತ್ತು. ನಾನು ವಿದೇಶದಲ್ಲಿ ನೆಲೆಸಿ 4 ವರ್ಷಗಳೇ ಆಗಿ ಹೋಗಿತ್ತು. ನಮಿತಾಳ ಪರಿಚಯವಾಗಿ ಕೇವಲ ಒಂದು ವರ್ಷವಷ್ಟೇ ಆಗಿತ್ತಾದರೂ ನಾನು ಅವಳೊಟ್ಟಿಗಿದ್ದರೆ ಭಾರತದಲ್ಲಿಯೇ ಇದ್ದೇನೆ ಎನ್ನುವ ಅನುಭವವಾಗುತ್ತಿತ್ತು. ನಮ್ಮ ಅಭಿರುಚಿ, ಅಡುಗೆ, ವಿದ್ಯಾಭ್ಯಾಸ, ಒಟ್ಟಾರೆ ಜೀವನ ಶೈಲಿ ಒಂದೇ ತೆರನಾಗಿದ್ದು ನಮ್ಮೀರ್ವರನ್ನು ತುಂಬಾ ಹತ್ತಿರ ತಂದಿತ್ತು.